# ಅಪ್ ಟು ಡೇಟ್ ಮೇಗರವಳ್ಳಿ!



**ತೀರ್ಥಹಳ್ಳಿ ತಾಲ್ಲೂಕಿನ ಮೇಗರವಳ್ಳಿಯ ಸುಬ್ರಹ್ಮಣ್ಯ ಎಂ.ಎನ್. ಸತತ ನಾಲ್ಕು ದಶಕಗಳಿಂದ ಅಂಕುಡೊಂಕು ರೇಖೆಗಳ ಮೂಲಕ ಖುಷಿ ಹಂಚುತ್ತಿದ್ದಾರೆ. ಅವರ ಸಾವಿರಾರು ವ್ಯಂಗ್ಯಚಿತ್ರಗಳು ಸಹೃದಯರ ಮುಖದಲ್ಲಿ ನಗುವಿನ ರೇಖೆ ಬಿಡಿಸಿವೆ. ಈ ನಗೆಕಾಯಕದ ಸುಬ್ರಹ್ಮಣ್ಯರನ್ನು 'ಎಪ್ರಿಲ್ ನಗೆ ಸಂಚಿಕೆ'ಗಾಗಿ 'ಸುಧಾ' ಮಾತನಾಡಿಸಿದೆ.**

■ ಸಂದರ್ಶನ: **ಸಂಕೇತ್ ಗುರುದತ್ತ**

◆ ತಮ್ಮ ವ್ಯಂಗ್ಯಚಿತ್ರವು ಮೊದಲಬಾರಿಗೆ ಪ್ರಕಟಗೊಂಡಿದ್ದು ಎಲ್ಲಿ ಮತ್ತು ಯಾವಾಗ?

'ಸುಧಾ' ವಾರಪತ್ರಿಕೆಯಲ್ಲಿ 1969ರಲ್ಲಿ ಪ್ರಕಟವಾಗಿತ್ತು. ಆಗ ನನಗೆ 14 ವರ್ಷಗಳಷ್ಟೇ! ಆಗಿಂದ ಈ ದಿನದವರೆಗೆ ನಾನು ಇದೇ ಕ್ಷೇತ್ರದಲ್ಲಿ ಮುಂದುವರೆಯಲು ಅದು ಸ್ಫೂರ್ತಿಯಾಯ್ತು!

◆ ತಮ್ಮ ಕುಟುಂಬದ ಹಿನ್ನೆಲೆಯೇನು?

ಸಣ್ಣ ಹೋಟೆಲ್ ನಡೆಸುತ್ತಿದ್ದ ಕುಟುಂಬ ನಮ್ಮದು. ಮನೆಯಲ್ಲಿ ಯಾರೂ ಕಲಾವಿದರಿರಲಿಲ್ಲ. ಆದರೆ ನನ್ನ ಬಾಲ್ಯದ ದಿನಗಳಲ್ಲಿ ಹೆಚ್ಚು ಖ್ಯಾತರಾಗಿದ್ದ ಎಸ್.ಕೆ. ನಾಡಿಗ್ ಅವರ ವ್ಯಂಗ್ಯಚಿತ್ರಗಳು ನನ್ನನ್ನು ಬಹಳ ಕಾಡಿ ಸೆಳೆದವು. ಅವರೇ ನನ್ನ ಮಾನಸ ಗುರುಗಳು. ಅವರ ವ್ಯಂಗ್ಯಚಿತ್ರಗಳನ್ನು ಅಭ್ಯಸಿಸುತ್ತಾ ಏಕಲವ್ಯನಂತೆ ಬೆಳೆದೆ. ಅವರೆಂದೂ ನನ್ನ ಹೆಬ್ಬೆರಳನ್ನೇನು ಕೇಳಲಿಲ್ಲ! ಮುಂದೆ ಎಂ.ಟಿ.ವಿ. ಆಚಾರ್ಯರ ಅಂಚೆ ಶಿಕ್ಷಣದಲ್ಲಿ ಕಲೆಯನ್ನು ಕಲಿತೆ. ಅದು ನನ್ನಲ್ಲಿ ವ್ಯಂಗ್ಯಚಿತ್ರ ರಚಿಸುವಲ್ಲಿ ಮತ್ತಷ್ಟು ಆತ್ಮವಿಶ್ವಾಸ ಮೂಡಿಸಿತು. ಈಗ ನನ್ನ ಮಗ ನನ್ನ ಕ್ಷೇತ್ರಕ್ಕೆ ಬರಲಿಲ್ಲ. ಮೆಕಾನಿಕಲ್ ಬಿ.ಟೆಕ್. ಮುಗಿಸಿ, ಇಸ್ರೋ ರಿಸರ್ಚ್ ಆಸೋಸಿಯೇಟ್ ಆಗಿದ್ದವನು, ಈಗ ಅಮೆರಿಕದ ಯೂನಿವರ್ಸಿಟಿ ಆಫ್ ಆರಿಝೋನಾದಲ್ಲಿ ಏರೋಸ್ಪೇಸ್ ಟೆಕ್ನಾಲಜಿಯಲ್ಲಿ ಎಂ.ಎಸ್. ಓದುತ್ತಿದ್ದಾನೆ. ನನ್ನ ಪತ್ನಿ ಖಾಸಗಿ ಕಾಲೇಜ್‌ನಲ್ಲಿ ಅರ್ಥಶಾಸ್ತ್ರ ಉಪನ್ಯಾಸಕಿಯಾಗಿದ್ದವರು ಪ್ರಿನ್ಸಿಪಾಲ್ ಆಗಿ ನಿವೃತ್ತಿ ಹೊಂದಿದ್ದಾರೆ. ಕುಟುಂಬದ ಈ ಇಬ್ಬರೂ ನನ್ನ ವ್ಯಂಗ್ಯಚಿತ್ರ ರಚನೆಗೆ ಪ್ರೋತ್ಸಾಹವನ್ನು ಕೊಡುತ್ತಿದ್ದಾರೆ.

◆ ತಮ್ಮ ವೃತ್ತಿ–ಪ್ರವೃತ್ತಿ ಎರಡೂ ಇದೇನಾ?

ವೃತ್ತಿಯಲ್ಲಿ ಜಿಲ್ಲಾ ಆರೋಗ್ಯ ಮೇಲ್ವಿಚಾರಕನಾಗಿದ್ದೆ. ಈಗ ನಿವೃತ್ತಿ ಹೊಂದಿದ್ದೇನೆ. ಖ್ಯಾತ ಜ್ಯೋತಿಷಿ ಬಿ.ವಿ. ರಾಮನ್ ಅವರ ಇಂಡಿಯನ್ ಕೌನ್ಸಿಲ್ ಆಫ್ ಆಸ್ಟ್ರಲಾಜಿಕಲ್ ಸೈನ್ಸ್‌ನ ಶಿವಮೊಗ್ಗ ಶಾಖೆಯಲ್ಲಿ ಹದಿನಾರು ವರ್ಷ ಗಣಿತ ಜ್ಯೋತಿಷ್ಯದ ಉಪನ್ಯಾಸಕರಾಗಿಯೂ ಸೇವೆ ಸಲ್ಲಿಸಿದ್ದೇನೆ. ಬಾಲ್ಯದಿಂದಲೂ ಆಸಕ್ತಿ ಇದ್ದ ಕಾರಣ ವ್ಯಂಗ್ಯಚಿತ್ರವು ಪ್ರವೃತ್ತಿಯಂತೆ ನಿರಂತರ ನನ್ನ ಪಯಣದಲ್ಲಿ ಜೊತೆಯಾಗಿದೆ. ಆದರೆ ಸುಮಾರು ಹತ್ತು ವರ್ಷಗಳ







" ಎಮ್ಮೆ ವ್ಯಾಪಾರ ಬಿಟ್ಟುಬಿಟ್ಟೆ..
ಈಗೇನಿದ್ದರೂ ಎಮ್ಮೆಲ್ಲೆ ವ್ಯಾಪಾರ ಮಾಡ್ತಿದ್ದೀನಿ..."